ಆ. ಲಖಿನಗಾಂವ ಪ್ರಾಥಮಿಕ ಆರೋಗ್ಯ ಘಟಕವು ಬಾತಂಬ್ರಿ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೆ ಬರುತ್ತಿದ್ದು, ಇದನ್ನು ಮೇಲ್ದರ್ಜೆಗೇರಿಸಿ, ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮಾಡುವ ಪ್ರಸ್ತಾವನೆಯು ಮಂಜೂರಾತಿಗಾಗಿ ನಿರ್ದೇಶಕರ ಕಛೇರಿಯಲ್ಲಿ ಸ್ವೀಕೃತವಾಗಿರುತ್ತದೆ. ಈ ಪ್ರಸ್ತಾವನೆಯನ್ನು ಮಾರ್ಗಸೂಚಿಗನುಗುಣವಾಗಿ ಪರಿಶೀಲಿಸಲಾಗುವುದು.

ಇ. ಈ ಹಂತದಲ್ಲಿ ಹೇಳಲು ಸಾಧ್ಯವಿಲ್ಲ.

ಲಿಂಗಸಗೂರು ತಾಲ್ಲೂಕಿನ ಮಸ್ಕಿ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆ

180 (553)- ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ (ಲಿಂಗಸಗೂರು) : ಮಾನ್ಯ ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಲಿಂಗಸಗೂರು ತಾಲ್ಲೂಕಿನ ಮಸ್ಕಿ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ಯೋಜನೆಯನ್ನು ತೆಗೆದುಕೊಳ್ಳುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆಯೆ?

ಆ. ಹಾಗಿದ್ದಲ್ಲಿ, ಸದರಿ ಯೋಜನೆಯನ್ನು ಯಾವಾಗ ಪ್ರಾರಂಭಿಸಿ, ಯಾವಾಗ ಮುಕ್ತಾಯಗೊಳಿಸಲಾಗುವುದು ?

ಇ. ಸದರಿ ಯೋಜನೆಯು ಸಧ್ಯ ಯಾವ ಹಂತದಲ್ಲಿದೆ; ಹಾಗೂ ಈ ಯೋಜನೆಗೆ ತಗಲಬಹುದಾದ ಒಟ್ಟು ಅಂದಾಜು ಮೊತ್ತವೆಷ್ಟು?

ಈ. ಕುಡಿಯುವ ನೀರಿನ ಯೋಜನೆಯನ್ನು ಯಾವ ಯೋಜನೆಯ ಮೂಲಕ ತೆಗೆದುಕೊಳ್ಳಲು ನಿರ್ಧರಿಸಲಾಗಿದೆ?

ಶ್ರೀ ಕೆ.ಬಿ.ಕೋಳಿವಾಡ್ (ಗ್ರಾಮೀಣ ನೀರು ಸರಬರಾಜು ರಾಜ್ಯ ಸಚಿವರು)

ಅ. ಹೌದು

ಆ. ಈ ಯೋಜನೆಯು ಆಡಳಿತಾತ್ಮಕವಾಗಿ ಇನ್ನೂ ಮಂಜೂರಾಗಿರುವುದಿಲ್ಲ.

ಇ. ಯೋಜನೆಯ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದೆ. ಪರಿಕಲ್ಪಿತ ರಿನ್ಯಾಸ ವರದಿಯ ಪ್ರಕಾರ ಯೋಜನೆಯ ಅಂದಾಜು ಮೊತ್ತ ಸುಮಾರು ರೂ. 5.85 ಕೋಟಿಗಳು.

ಈ. ಈ ಕುರಿತು ಇನ್ನೂ ತೀರ್ಮಾನಿಸಿರುವುದಿಲ್ಲ.

ಶಾಸಕರ ಪ್ರದೇಶಾಭಿವೃದ್ಧಿ ನಿಧಿ

4 (43)- ಶ್ರೀಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಯೋಜನ ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. 2001-02ನೇ ಸಾಲಿಗೆ ರಾಜ್ಯದ ಶಾಸಕರ ಪ್ರದೇಶಾಭಿವೃದ್ಧಿ ನಿಧಿಗೆ ನಿಗದಿಪಡಿಸಿದ ಹಣ ಎಷ್ಟು?

ಆ. ಇದರಲ್ಲಿ ಇದುವರೆಗೆ ಬಿಡುಗಡೆ ಮಾಡಿರುವ ಹಣ ಎಷ್ಟು ?

ಇ. ಪೂರ್ಣ ಹಣ ಬಿಡುಗಡೆಯಾಗದಲ್ಲಿ ಕಾರಣವೇನು? ಯಾವಾಗ ಪೂರ್ಣ ಹಣವನ್ನು ಬಿಡುಗಡೆ ಮಾಡಲಾಗುವುದು?

ಈ. 2001-02ರಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಲ್ಲಿ ಸೂಚಿಸಿದ ಕೆಲಸಗಳ ಸಂಖ್ಯೆ ಎಷ್ಟು? ಇದರಲ್ಲಿ ಅನುಮೋದನೆ ನೀಡಿದ ಕಾಮಗಾರಿಗಳ ಸಂಖ್ಯೆ ಎಷ್ಟು? ಪೂರ್ಣಗೊಂಡ ಕಾಮಗಾರಿ ಎಷ್ಟು? (ಜಿಲ್ಲಾವಾರು ವಿವರಗಳನ್ನು ನೀಡುವುದು)

ಉ. 2002-03ನೇ ಸಾಲಿಗೆ ನಿಗದಿಪಡಿಸಿರುವ ಹಣ ಬಿಡುಗಡೆ ಆಗಿದೆಯೇ? ಇಲ್ಲವಾದರೆ ಕಾರಣವೇನು ಯಾವಾಗ ಬಿಡುಗಡೆಯಾಗುವುದು?

ಶ್ರೀ ಆರ್.ಬಿ.ತಿಮ್ಮಾಪೂರ (ಯೋಜನ ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು)

ಅ. 75 ಕೋಟಿ ರೂಗಳು

ಆ. 75 ಕೋಟಿ ರೂಗಳು

ಇ. ಉದ್ಭವಿಸುವುದಿಲ್ಲ

ಈ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಉ. ರಾಜ್ಯದಲ್ಲಿನ ಬರಗಾಲ ಪರಿಸ್ಥಿತಿಯನ್ನು ಗಮನದಲ್ಲಿಟ್ಟು ಕೊಂಡು ಹಣ ಬಿಡುಗಡೆ ಮಾಡುವ ಬಗ್ಗೆ ತೀರ್ಮಾನಿಸಲಾಗುವುದು.

ಅನುಬಂಧ

	ಶಾಸಕರು ಸೂಚಿಸಿದ ಸಂಖ್ಯೆ	ಅನುಮೋದನೆ ನೀಡಿದ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ
1	2	3	4
ಬೆಂಗಳೂರು	303	261	64
ಬೆಂಗಳೂರು (ಗ್ರಾಮಾಂತರ)	143	100	-
ಬೆಳಗಾಂ	394	200	14
ಬಾಗಲಕೋಟೆ	132	116	-
ಬಳ್ಳಾರಿ	126	126	28
ಬೀದರ್	-	-	-
ಬಿಜಾಪುರ	149	149	-
ಚಾಮರಾಜನಗರ	55	55	22
ಚಿಕ್ಕಮಗಳೂರು	154	154	24
ಚಿತ್ರದುರ್ಗ	129	121	9
ದಕ್ಷಿಣ ಕನ್ನಡ	286	197	2
ಧಾರವಾಡ	156	151	2
ದಾವಣಗೆರೆ	170	146	75
ಗುಲ್ಬರ್ಗಾ	208	208	65
ಗದಗ	78	34	19
ಹಾಸನ	214	214	52

1	2	3	4
ಹಾವೇರಿ	75	75	10
ಕೊಪ್ಪಳ	167	167	73
ಕೊಡಗು	101	75	12
ಕೋಲಾರ	225	193	14
ಮಂಡ್ಯ	328	322	116
ಮೈಸೂರು	157	157	17
ರಾಯಚೂರು	94	94	8
ಶಿವಮೊಗ್ಗ	205	182	50
ಉತ್ತರ ಕನ್ನಡ	154	152	19
ಉಡುಪಿ	204	131	83
ತುಮಕೂರು	265	230	16
ಒಟ್ಟು	4642	4010	796

ಕರ್ನಾಟಕ ವಿಧಾನಸಭೆ

ಹನ್ನೊಂದನೇ ವಿಧಾನಸಭೆ

ಐದನೇ ಅಧಿವೇಶನ

ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕ, 2002

(2002ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 8)
(ವಿಧಾನಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿ)

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಅಧಿನಿಯಮ, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಅಧಿನಿಯಮ, 1966ನ್ನು (1966ರ ಕರ್ನಾಟಕ ಅಧಿನಿಯಮ 16) ಇದರಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೂರನೇ ವರ್ಷದಲ್ಲಿ ಕರ್ನಾಟಕ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ಅಧಿನಿಯಮ, 2002 ಎಂದು ಕರೆಯುತಕ್ಕದ್ದು.

2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.